ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ
ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ
ದಿನಾಂಕ : DATE: 4/8/20

ದೆಹಲಿಯಾತ್ರೆ-ಸಂಪುಟ ವಿಸ್ತರಣೆ, ಆಡಳಿತಾತ್ಮಕ ಕ್ರಮಗಳಿಗೆ ಗ್ರಹಣ

# ಬಿಎಸ್‌ವೈ ಆಸ್ಪತ್ರೆಗೆ ರಾಜಕಾರಣ ನೆನೆಗುದಿಗೆ



ಸಂ.ಕ ಸಮಾಚಾರ ಬೆಂಗಳೂರು 4/8/20

ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೂ ಸೋಂಕು ತಗುಲಿದ ಪರಿಣಾಮ ರಾಜ್ಯದ ಆಡಳಿತ ವ್ಯವಸ್ಥೆಯೂ ಸೇರಿದಂತೆ ಒಟ್ಟಾರೆಯಾಗಿ ರಾಜ್ಯದಲ್ಲಿನ ರಾಜಕೀಯ ವಿದ್ಯಮಾನಗಳಿಗೂ ಗ್ರಹಣ ಹಿಡಿದಂತಾಗಿದೆ.

ಆಗಸ್ಟ್ ತಿಂಗಳಲ್ಲೇ ಸಂಪುಟ ವಿಸ್ತರಣೆಗೆ ಯಡಿಯೂರಪ್ಪ ಮುಂದಾಗಿದ್ದರು. ಅದಕ್ಕೆ ಪೂರ್ವಭಾವಿಯಾಗಿ ಎಲ್ಲ ಸಿದ್ದತೆಗಳನ್ನು ಮಾಡಿಕೊಂಡಿದ್ದರು. ರಾಜಕೀಯವಾಗಿ ಪೂರಕ ವಾತಾವರಣ ಸೃಷ್ಟಿಸುವಲ್ಲಿಯೂ ಯಡಿಯೂರಪ್ಪ ಯಶ ಕಂಡಿದ್ದರು. ಹೀಗಾಗಿ ಸಂಪುಟಕ್ಕೆ ಸೇರ್ಪಡೆಯಾಗಲು ಮಾಜಿ ಸಚಿವರಾದ ಎಂಟಿಬಿ ನಾಗರಾಜ್, ಆರ್.ಶಂಕರ್ ಸೇರಿದಂತೆ ಹಲವರು ಉತ್ಸುಕರಾಗಿ ತುದಿಗಾಲ ಮೇಲೆ ನಿಂತಿದ್ದರು. ಆದರೆ, ಕೊರೊನಾ ಪಿಡುಗು ಎಲ್ಲರ ನಿರೀಕ್ಷೆಗೆ ತಣ್ಣೀರೆರಚಿದೆ.

ಸದ್ಯ ಆಡಳಿತದ ಎಲ್ಲ ಜವಾಬ್ದಾರಿಯನ್ನೂ ಯಡಿಯೂರಪ್ಪ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿಎಂ ವಿಜಯ್‌ಭಾಸ್ಕರ್ ಅವರಿಗೆ ವಹಿಸಿದ್ದಾರೆ. ಯಡಿಯೂರಪ್ಪ ಸಂಪುಟದಲ್ಲಿ ಮೂವರು ಉಪಮುಖ್ಯಮಂತ್ರಿಗಳಿದ್ದರೂ ಮುಖ್ಯ ಕಾರ್ಯದರ್ಶಿಗೆ ವಹಿಸುವ ಮೂಲಕ ರಾಜಕೀಯ ಜಾಣ್ಮೆ ಮೆರೆದಿದ್ದಾರೆ. ಮೂವರು ಉಪಮುಖ್ಯಮಂತ್ರಿಗಳಲ್ಲಿ ಯಾರಿಗೇ ಜವಾಬ್ದಾರಿ ಕೊಟ್ಟರೂ ಅಸಮಾಧಾನಕ್ಕೆ ಕಾರಣವಾಗುವ ಮತ್ತು ರಾಜಕೀಯವಾಗಿಯೂ ತಿರುವು ಪಡೆದುಕೊಳ್ಳುವ ಸಾಧ್ಯತೆಗಳಿದ್ದವು. ಹೀಗಾಗಿ ಮುಖ್ಯ ಕಾರ್ಯದರ್ಶಿಗೆ ವಹಿಸಲಾಗಿದೆ..

ಸಂಪುಟ ವಿಸ್ತರಣೆ ಕುರಿತಂತೆ ವಾರಾಂತ್ಯದಲ್ಲಿ ಯಡಿಯೂರಪ್ಪ ದೆಹಲಿಗೆ ತೆರಳಬೇಕಿತ್ತು. ಆರ್.ಶಂಕರ್ ಮತ್ತು ಎಂಟಿಬಿ ನಾಗರಾಜ್ ಜೊತೆಗೆ ಯೋಗೇಶ್ವರ್‌ಗೆ ಅವಕಾಶ ನೀಡಬೇಕೋ ಅಥವಾ ಎಚ್.ವಿಶ್ವನಾಥ್ ಅವರಿಗೆ ಸ್ಥಾನ ಕಲ್ಪಿಸಬೇಕೋ ಎಂಬುದನ್ನೂ ನಿಗದಿಪಡಿಸಬೇಕಿತ್ತು. ಆದರೆ, ಅದಕ್ಕೂ ಕೊರೊನಾ ಅಡ್ಡಗಾಲು ಹಾಕಿದಂತಾಗಿದೆ. ಹೀಗೆ ಒಟ್ಟಾರೆಯಾಗಿ ಕೊರೊನಾ ರಾಜ್ಯದಲ್ಲಿನ ಆಡಳಿತ ವ್ಯವಸ್ಥೆ ಮತ್ತು ರಾಜಕೀಯ ಬೆಳವಣಿಗೆಗಳಿಗೆ ತಡೆಯೊಡ್ಡಿದೆ.

ಇದಿಷ್ಟೂ ಸಾಲದೆಂಬಂತೆ ಪ್ರಮುಖ ವಿಪಕ್ಷವಾದ ಕಾಂಗ್ರೆಸ್ ಕೂಡ ಕೈಕೈ ಹಿಸುಕಿಕೊಳ್ಳುವಂತಾಗಿದೆ. ಕೊರೊನಾ ಪರಿಕರಗಳ ವಿಷಯದಲ್ಲಿ ಅವ್ಯವಹಾರ ನಡೆದಿದೆ ಎಂದು ಹುಯಿಲೆಬ್ಬಿಸಿದ್ದ ಕಾಂಗ್ರೆಸ್ ಮುಖಂಡರಿಗೂ ಈಗ ಬೇರಾವ ದಾರಿ ಕಾಣದಂತಾಗಿದೆ. ಹೀಗಾಗಿ ಯಡಿಯೂರಪ್ಪ ಗುಣವಾಗಿ ಬರಲೆಂದು ಹಾರೈಸುವುದೊಂದೇ ಸದ್ಯಕ್ಕೆ ಅವರಿಗೂ ಉಳಿದಿರುವ ದಾರಿ ಎಂಬಂತಾಗಿದೆ.

ಯಡಿಯೂರಪ್ಪ ಮಣಿಪಾಲ್ ಆಸ್ಪತ್ರೆಗೆ ಸೇರ್ಪಡೆಯಾಗಿರುವುದರಿಂದ ಸಮ ಪೂರ್ಣವಾಗಿ ಚೇತರಿಸಿ ಕೊಳ್ಳುವವರೆಗೂ ಹೊರ ಬರುವಂತಿಲ್ಲ. ವೈದ್ಯಕೀಯ ಮೂಲಗಳ ಪ್ರಕಾರ ಒಟ್ಟು ಹದಿನಾಲ್ಕು ದಿನಗಳ ಕ್ವಾರಂಟೈನ್‌ಗೆ ಒಳಪಡಬೇಕು. ಆದರೆ.

ಎಳು ದಿನಗಳ ನಂತರ ಮತ್ತೊಮ್ಮೆ ತಪಾಸಣೆ ನಡೆಸಲಾಗುವುದು.

ಆಗ ವೈದ್ಯಕೀಯ ವರದಿಯಲ್ಲಿ ನೆಗೆಟಿವ್ ಎಂದು ಬಂದಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.



## ಕೊರೊನಾ ಹೆಮ್ಮಾರಿ

- ಬಿಎಸ್‌ವೈಗೆ ಸೋಂಕು, ಆಡಳಿತ ವ್ಯವಸ್ಥೆಗೂ ಗ್ರಹಣ
- ರಾಜಕೀಯ ಬೆಳವಣಿಗೆಗೂ ಕೊರೊನಾ ಪಿಡುಗು
- ಸಂಪುಟ ವಿಸ್ತರಣೆ ಮುಂದಕ್ಕೆ ಸಚಿವಾಕಾಂಕ್ಷಿಗಳಿಗೆ ಢವಢವ
- ಆಡಳಿತ ಹೊಣೆಭಾರ ಮುಖ್ಯ ಕಾರ್ಯದರ್ಶಿ ಹೆಗಲಿಗೆ
- ಐಎಎಸ್, ಐಪಿಎಸ್ ವರ್ಗಾವಣೆ ಪಟ್ಟಿಗೂ ತಡೆ